**ಇಂದು ದಿನಾಂಕ *: 30.03.2023* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ. ಎಸ್.ಎಂ.ಪಿ. ವಕೀಲರಿಂದಃ**

ನನ್ನ ತಂದೆ ಹೆಸರು ತಮ್ಮಣ್ಣಿ ಮಲ್ಲೇಗೌಡ. ನನ್ನ ಗಂಡನ ಹೆಸರು ಎಲೆಗೌಡ. ನಾನು ಬೆಟ್ಟದ ಪುರ ಗ್ರಾಮದಲ್ಲಿ ಹುಟ್ಟಿದ್ದೇನೆ. 2 ನೇ ಪ್ರತಿವಾದಿ ನನ್ನ ಅಣ್ಣ, 3 ನೇ ಪ್ರತಿವಾದಿ ನನ್ನ ಅತ್ತಿಗೆ. ಪ್ರತಿವಾದಿ 04 ರಿಂದ 06 ನನ್ನ ಸಹೋದರರು. 7 ನೇ ಪ್ರತಿವಾದಿ ತಾಯಮ್ಮ ಗೊತ್ತಿಲ್ಲ. ನಾನು ಭಾಗ ಕೇಳಿ ದಾವೆ ಹಾಕಿದ್ದೇನೆ. ಸಾಕ್ಷಿಗೆ ದಿಃ 23.04.2007 ರ ನೊಂದಾಯಿತ ಜೆರಾಕ್ಸ್ ವಿಭಾಗ ಪತ್ರದಲ್ಲಿರುವ ಭಾವಚಿತ್ರವನ್ನು ತೋರಿಸಿ ಅದು ಯಾರ ಭಾವಚಿತ್ರ ಎಂದು ಕೇಳಿದ್ದಕ್ಕೆ ಸಾಕ್ಷಿ ಅದು ನನ್ನ ತಂದೆಯ ಭಾವಚಿತ್ರ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಇರುವ ಇನ್ನೊಂದು ಭಾವಚಿತ್ರದ ಬಗ್ಗೆ ಕೇಳಿದ್ದು ಸಾಕ್ಷಿ ಭಾವಚಿತ್ರ ನೋಡಿ ಅದು ನನ್ನ ಅಣ್ಣ ಶಂಕರೇಗೌಡನ ಭಾವಚಿತ್ರ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿರುವ ಉಳಿದ ಭಾವಚಿತ್ರಗಳ ಬಗ್ಗೆ ಕೇಳಿದ್ದು ಸಾಕ್ಷಿ ಸದರಿ ಭಾವಚಿತ್ರಗಳು ನನ್ನ ಸಹೋದರರಾದ ಮೈಲಾರಿ, ಲೊಕೇಶ ಮತ್ತು ಶಿವ ರವರದು ಎಂದು ನುಡಿಯುತ್ತಾರೆ. ಇನ್ನೊಂದು ಭಾವಚಿತ್ರ ನೋಡಿ ಸಾಕ್ಷಿ ಸದರಿ ಭಾವಚಿತ್ರ ನನ್ನದಾಗಿರುತ್ತದೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**